# ಯುವಚೇತನ



ಈ ದೇಶದಲ್ಲಿ ಧರ್ಮ ಮತ್ತು ಅಧ್ಯಾತ್ಮ ಪ್ರವಾಹಗಳು ಇನ್ನೂ ಹರಿಯುತ್ತಿವೆ. ಪ್ರಪಂಚವನ್ನೆಲ್ಲಾ ಇವು ತುಂಬಿ ರಾಜಕೀಯ ಮಹತ್ವಾಕಾಂಕ್ಷೆ ಮತ್ತು ಸಾಮಾಜಿಕ ಗೊಂದಲಗಳಲ್ಲಿ ಸಿಕ್ಕಿ ಜರ್ಝರಿತವಾಗಿ ನಿರಾಶೆಗೊಂಡು ಮೃತ್ಯುಪಾಯವಾಗಿರುವ ಪಾಶ್ಚಾತ್ಯ ದೇಶಗಳಿಗೆ ಹೊಸಬೆಳಕನ್ನು, ಹೊಸ ಬಾಳನ್ನು ನೀಡಬೇಕಾಗಿದೆ. ಸಮರಸವೂ ವಿರಸವೂ ಆದ ಅನೇಕ ಸ್ವರಗಳ ನಡುವೆ ಭಾರತದ ವಾತಾವರಣವನ್ನು ತುಂಬಿರುವ ನಾನಾ ಧ್ವನಿಗಳ ಗೊಂದಲದ ನಡುವೆ ಸರ್ವೋಚ್ಚವೂ, ಸ್ಪಷ್ಟವೂ, ಪೂರ್ಣವೂ ಆದ ಒಂದು ಧ್ವನಿ ಕೇಳುತ್ತಿದೆ. ಅದು ''ತ್ಯಾಗ''. 'ತ್ಯಾಗಮಾಡು' ಎಂಬುದೇ ಭಾರತದ ಧರ್ಮಗಳ ಧ್ಯೇಯವಾಕ್ಯ. ಈ ಪ್ರಪಂಚ ಒಂದೆರಡು ದಿನಗಳ ಭ್ರಾಂತಿ; ಜೀವನ ಕ್ಷಣಿಕ. ಇದರಿಂದ ಬಹಳ ದೂರದಲ್ಲಿ ಅನಂತ ಅಪಾರ ರಾಜ್ಯವಿದೆ. ಅದನ್ನು ಮಹಾವೀರ, ಮನೀಷಿಗಳ ಹೃದಯದ ಜ್ಯೋತಿಯು ಬೆಳಗುತ್ತಿದೆ. ಅವರು ಈ ಅನಂತ ಜಗತ್ತನ್ನು ಕೂಡ ಒಂದು ಕಸದ ಗುಂಡಿಯಂತೆ ನೋಡಬಲ್ಲರು. ಇದನ್ನು ಮೀರಿ ಹೋಗಬೇಕು, ಅನಂತ ಕಾಲವನ್ನು ಕೂಡ ಅವರು ಗಣನೆಗೆ ತರುವುದಿಲ್ಲ. ಅವರಿಗೆ ಕಾಲವೇ ಇಲ್ಲ, ಕಾಲಾತೀತರಾಗಿ ಹೋಗುವರು. ದೇಶವನ್ನು ಕೂಡ ಅವರು ಲೆಕ್ಕಿಸುವುದಿಲ್ಲ. ಅದನ್ನು ಮೀರಿ ಹೋಗಲು ಬಯಸುವರು. ಕಾಲದೇಶಗಳನ್ನು ಮೀರಿ ಹೋಗುವುದೇ ಧರ್ಮದ ಸಾರ. ಈ ದೇಶದ ಒಂದು ಲಕ್ಷಣವೇ ಈ ಅತೀಂದ್ರಿಯ ದರ್ಶನ, ಅತೀತರಾಗಬೇಕೆಂಬ ಹೋರಾಟ. ಪ್ರಕೃತಿಯ ತೆರೆಯನ್ನು ಸೀಳಿ, ಎಂತಹ ಅಪಾಯವನ್ನಾದರೂ ಎದುರಿಸಿ, ಎಷ್ಟು ಕಷ್ಟವಾದರೂ ಆಗಲಿ ಅದರ ಹಿಂದಿರುವ ಪರಂಜ್ಯೋತಿಯ ಕ್ಷಣಿಕ ದರ್ಶನವನ್ನಾದರೂ ಪಡೆಯಬೇಕೆಂಬುದೇ ನಮ್ಮ ಆದರ್ಶ. ಆದರೆ ದೇಶದ ಜನರೆಲ್ಲಾ ಸರ್ವಸಂಗ ಪರಿತ್ಯಾಗ ಮಾಡಲಾರರು. ಅವರಿಗೆ ನೀವು ಪ್ರೋತ್ಸಾಹ ಕೊಡಬೇಕಾದರೆ ಇಲ್ಲಿದೆ ಮಾರ್ಗ. ನಿಮ್ಮ ರಾಜನೀತಿ, ಸಮಾಜ ಸುಧಾರಣೆ, ಐಶ್ವರ್ಯ ಸಂಪಾದನೆ, ವ್ಯಾಪಾರ, ಇವುಗಳ ಕತೆಯೆಲ್ಲ ನೀರುಹಕ್ಕಿಯ ಮೇಲಿನ ನೀರಿನಂತೆ ಜಾರಿ ಹೋಗುವುದು. ನೀವು ಜಗತ್ತಿಗೆ ಬೋಧಿಸಬೇಕಾಗಿರುವುದು ಈ ಆಧ್ಯಾತ್ಮಿಕತೆಯನ್ನು. ನಾವು ಆ ದೇಶಗಳಿಂದ ಏನನ್ನಾದರೂ ಕಲಿಯುವುದಿದೆಯೆ? ಹೌದು; ವಿಜ್ಞಾನಶಾಸ್ತ್ರ, ಸಂಘಟನಾಶಕ್ತಿ, ಅಧಿಕಾರವನ್ನು ಬಳಸುವ ರೀತಿ, ವ್ಯಕ್ತಿಗಳ ಸಾಮರ್ಥ್ಯವನ್ನು ವ್ಯವಸ್ಥೆಗೊಳಿಸುವ ಕೌಶಲ, ಕಿರಿದಾದುದರಿಂದಲೂ ಹಿರಿದಾದುದನ್ನು ಪಡೆಯುವ ಕಲೆ; ಇಂತಹ ಕೆಲವನ್ನು ಕಲಿಯಬೇಕಾಗಿದೆ. ಆದರೆ ಯಾರಾದರೂ ಭರತಖಂಡದಲ್ಲಿ, ಕೇವಲ ತಿನ್ನುವುದು ಕುಡಿಯುವುದು ವಿನೋದ ಇವೇ ಜೀವನದ ಗುರಿ ಎಂದು ಭಾವಿಸಿದರೆ, ದೇವರ ಬದಲು ಪ್ರಪಂಚವನ್ನು ತಂದರೆ, ಅವನು ಮಿಥ್ಯಾವಾದಿ. ಈ ಪುಣ್ಯಭೂಮಿಯಲ್ಲಿ ಅವನಿಗೆ ಸ್ಥಳವಿಲ್ಲ. ಭಾರತೀಯರು ಅವನಿಗೆ ಕಿವಿಗೊಡುವುದಿಲ್ಲ. ಪಾಶ್ಚಾತ್ಯ ನಾಗರಿಕತೆ ಕೋರೈಸುತ್ತಿರುವಾಗಲೂ, ಅದರ ನಯನಾಜೂಕುಗಳು, ಅದರ ಅದ್ಭುತ ಶಕ್ತಿಯ ಅಭಿವ್ಯಕ್ತಿ ಇವುಗಳು ಇದ್ದಾಗ್ಯೂ, ಅವರೆದುರಿಗೆ ನಿಂತು ನಾನು ಇದೆಲ್ಲಾ ಭ್ರಾಂತಿ, ಇದೆಲ್ಲ ಮಿಥ್ಯೆಯೆಂದು ಮುಕ್ತಕಂಠದಿಂದ ಸಾರಿ ಹೇಳುತ್ತೇನೆ. ಅವೆಲ್ಲವೂ ನಿಸ್ಸಾರ. ಈಶ್ವರನೊಬ್ಬನೇ ಸತ್ಯ, ಆತ್ಮ ಒಂದೇ ಸತ್ಯ, ಆಧ್ಯಾತ್ಮ ಒಂದೇ ಸತ್ಯ, ಅವನ್ನು ಮಾತ್ರ ನೆಚ್ಚಿ.

ಆದ್ದರಿಂದ ಮಿತ್ರರೇ, ನಮ್ಮ ಜನಾಂಗದ ಶ್ರೇಯಸ್ಸಿಗೆ ಇರುವುದೊಂದೇ ಮಾರ್ಗ. ಅದು ಪೂರ್ವಿಕರು ಇತ್ತ ಅಮೂಲ್ಯ ಧರ್ಮ ಧನವನ್ನು ರಕ್ಷಿಸುವುದು. ಒಂದು ದೇಶದ ಪ್ರಖ್ಯಾತ ರಾಜರು, ತಮ್ಮ ವಂಶದ ಮೂಲಪುರುಷರು ರಾಜರಲ್ಲ , ಕೋಟೆ ಕೊತ್ತಲಗಳಲ್ಲಿ ವಾಸಿಸುತ್ತಿದ್ದ ಮತ್ತು ಸುಲಿಗೆಮಾಡುತ್ತಿದ್ದ ಪಾಳೆಯಗಾರರಲ್ಲ , ಕಾಡಿನಲ್ಲಿ ವಾಸಿಸುತ್ತಿದ್ದ ಅರೆಬತ್ತಲೆ ಋಷಿಗಳು ಎಂದು ನಿಷ್ಕರ್ಷಿಸುವುದಕ್ಕೆ ಪ್ರಯತ್ನಿಸುವುದನ್ನು ಕೇಳಿರುವಿರಾ? ಈ ದೇಶದಲ್ಲಿ ಮಾತ್ರ ಅದು ಸಾಧ್ಯ. ಉಳಿದ ದೇಶಗಳಲ್ಲಿ ಧಾರ್ಮಿಕ ವ್ಯಕ್ತಿಗಳು ತಮ್ಮ ಪೂರ್ವಿಕರು ರಾಜರಾಗಿದ್ದರೆಂದು ತೋರಲೆತ್ನಿಸುವರು. ಆದರೆ ಇಲ್ಲಿ ರಾಜಮಹಾರಾಜರುಗಳೂ ತಮ್ಮ ಪೂರ್ವಿಕರು ಋಷಿಗಳಾಗಿದ್ದರೆಂದು ಹೇಳುವರು. ನಿಮಗೆ ಅಧ್ಯಾತ್ಮದಲ್ಲಿ ನಂಬಿಕೆ ಇರಲಿ ಇಲ್ಲದಿರಲಿ, ರಾಷ್ಟ್ರದ ಹಿತಕ್ಕಾಗಿ ಅಧ್ಯಾತ್ಮವನ್ನು ನಂಬಿ ಅದನ್ನು ರಕ್ಷಿಸಬೇಕು. ಅನಂತರ ಮತ್ತೊಂದು ಕೈಯಿಂದ ಇತರ ದೇಶಗಳಿಂದ ಏನನ್ನು ಬೇಕಾದರೂ ಪಡೆಯಿರಿ. ಆದರೆ ಅವು ಯಾವಾಗಲೂ ಪ್ರಧಾನ ಆದರ್ಶಕ್ಕೆ ಅಧೀನವಾಗಿರಬೇಕು. ಇದರಿಂದ ಅದ್ಭುತವಾದ, ವೈಭವಪೂರ್ಣವಾದ ಭವಿಷ್ಯ ಭಾರತವು ಮೂಡಿಬರುವುದು. ಅದು ಹಿಂದಿಗಿಂತ ಹೆಚ್ಚು ಭವ್ಯವಾಗುವುದು. ಅದು ಬರುತ್ತಿದೆ ಎಂದು ನಿಸ್ಸಂದೇಹವಾಗಿ ಹೇಳಬಲ್ಲೆ. ಹಿಂದಿನ ಋಷಿಗಳನ್ನು ಮೀರಿಸಿದ ಋಷಿಗಳು ಉದಯಿಸುವರು. ನಿಮ್ಮ ಪೂರ್ವಿಕರು ತೃಪ್ತರಾಗುವುದು ಮಾತ್ರವಲ್ಲ , ಇಷ್ಟು ಮಹಿಮಾವಂತರಾದ, ಪ್ರಖ್ಯಾತರಾದ ತಮ್ಮ ವಂಶಜರನ್ನು ನೋಡಿದಾಗ ಹೆಮ್ಮೆ ಪಡುವರು.

*('ರಾಮನಾಡಿನ ಬಿನ್ನವತ್ತಳೆಗೆ ಉತ್ತರ', ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೩, ಪು.೩೮, ಪ್ರ : ಮೈಸೂರು ಆಶ್ರಮ, ೨೦೧೩)*



# ಪಂಚಕೇದಾರ ಯಾತ್ರೆ

ಸ್ವಾಮಿ ಜ್ಞಾನಯೋಗಾನಂದ

## ಭಾಗ ೫

*(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)*

### ೭. ತರಗೆಲೆ ಮುಚ್ಚಿದ ಹಾದಿ – ಕಾಡಿನ ಪಯಣ

ಬೆಳಿಗ್ಗೆ ಎದ್ದು ಶೌಚಾದಿ ಮುಗಿಸಿ ಬಂದಾಗ ಐದೂವರೆ ಗಂಟೆ. ರುದ್ರನಾಥನ ದೇಗುಲದ ಬಾಗಿಲು ತೆರೆಯುವುದು ತಡವಾದೀತು; ನಾವು ಅದಕ್ಕೆ ಕಾಯುವ ಬದಲು, ದೂರದಿಂದಲೇ ರುದ್ರನಾಥನಿಗೆ ನಮಸ್ಕರಿಸಿ ಹೊರಡುವುದು ಒಳ್ಳೆಯದು ಎಂದ ವಿಕ್ರಂ ಸಿಂಹ ಬಿಷ್ಟ. ನಾವು ನಮ್ಮೆಲ್ಲ ಸಾಮಾನುಗಳನ್ನು ಹೊತ್ತು ತಂದು, ಹೊರಟು ನಿಂತೆವು. ಪಂಡಿತ್‌ಜೀಗೆ ಇನ್ನೂ ಹಣ ಕೊಟ್ಟಿರಲಿಲ್ಲ. ಬಾಡಿಗೆ ಮುನ್ನೂರು ರೂಪಾಯಿ, ಊಟ–ತಿಂಡಿ–ಬಿಸಿನೀರು ಇತ್ಯಾದಿಗಳಿಗೆ ಇನ್ನೂರೈವತ್ತು, ಒಟ್ಟು ಐನೂರ ಐವತ್ತು ಎಂದ ಪಂಡಿತ್‌ಜೀ. ಅಲ್ಲಿ ನಾವು ಚೌಕಾಶಿ ಮಾಡುವುದು ಸರಿಯಲ್ಲವೆನಿಸಿತು. ಸಮತಟ್ಟಿನ ಪ್ರದೇಶದಲ್ಲಿ ಸಾಮಾನುಗಳಿಗೆ ಎಷ್ಟು ಹಣವಿರುತ್ತದೋ ಅದಕ್ಕೆ ಮೂರರಷ್ಟು ಹಣ ಇಲ್ಲಿ ಹೇಳುತ್ತಾರೆ. ಅದರಲ್ಲಿ ಅವರದೂ ತಪ್ಪಿಲ್ಲ. ಅವರಿಗೆ ಇದೊಂದೇ ಜೀವನೋಪಾಯ; ವರ್ಷದ ಆರು ತಿಂಗಳಲ್ಲಿ ಯಾತ್ರಿಕರಿಂದ ಬಂದಷ್ಟು ಹಣದಿಂದಲೇ ಅವರ ಜೀವನ ನಡೆಯಬೇಕು. ಎರಡನೆಯದಾಗಿ, ಅಲ್ಲಿನ ಅಹಾರ ವಸ್ತು ಇತ್ಯಾದಿ ಎಲ್ಲವನ್ನೂ ತಗ್ಗು ಪ್ರದೇಶದಿಂದ ಹೊತ್ತೇ ತರಬೇಕು, ಇಲ್ಲ ಹೇಸರ ಗತ್ತೆಯ ಮೇಲೆ ಹೊರಿಸಿ ತರಬೇಕು. ಅಷ್ಟೊಂದು ಕಷ್ಟಸಹಿಷ್ಣುಗಳಾದವರ ಮುಂದೆ ನಾವು ಅಲ್ಪ ಮೊತ್ತಕ್ಕಾಗಿ ಚೌಕಾಶಿ ಮಾಡಿ, ಅವರ ಮುಂದೆ ತುಂಬಾ ಸಣ್ಣವರಾಗುತ್ತೇವೆ ಅನ್ನಿಸಿತು.

ನಾವಿದ್ದ ಹೋಟೆಲಿನ ಹಿಂಭಾಗದಲ್ಲಿ ಗುಡ್ಡದಿಂದ ಇಳಿದು ಬರುತ್ತಿದ್ದ ನೀರಿಗೆ ಒಂದು ಪೈಪ್ ಕಟ್ಟಿ, ಅದರ ಕೆಳಗೆ ಒಂದು ಪಾತ್ರೆಯನ್ನಿಟ್ಟಿದ್ದರು. ಪಾತ್ರೆ ತುಂಬಿ, ಅದರಿಂದ ನೀರು ತುಳುಕಿ, ಹೊರಕ್ಕೆ ಹರಿದು ಬರುತ್ತಿತ್ತು. ಅದರಿಂದಲೆ ನಮ್ಮ ನೀರಿನ ಬಾಟಲಿಗೆ ನೀರು ತುಂಬಿಸಿಕೊಂಡೆವು. ನಾವು ನಡಿಗೆ ಆರಂಭಿಸಿ, ಹಿಂದಿನ ದಿನ ನಡೆದಿದ್ದ ಬುಗ್ಯಾಲ್ ದಾರಿಯಲ್ಲೇ ಒಂದರ್ಧ ಗಂಟೆ ನಡೆದೆವು. ಅಲ್ಲಿ ಅದೇ ಹೋಟೆಲ್ ಸಿಕ್ಕಿತು. ನಿನ್ನೆ ಅಲ್ಲಿ ಚಹಾ ಸೇವಿಸದೆ ಮರಳಿದ್ದೆವು; ಆದರೆ ಇಂದು ಅಲ್ಲಿ ತಿಂಡಿ ಮಾಡಲೇಬೇಕಾಯಿತು. ಏಕೆಂದರೆ ದಾರಿ ಮಧ್ಯೆ ಬೇರೆ ಯಾವ ಹೋಟೆಲ್‌ಗಳೂ ಇಲ್ಲ ; ಅನಸೂಯಾ ದೇವಿ ಮಂದಿರದಲ್ಲೇ ಮುಂದೆ ಏನಾದರೂ ಸಿಗಬೇಕಿದ್ದರೆ. ಆದರೆ ಅಲ್ಲಿಗೆ ತಲುಪುವಾಗ ಮಧ್ಯಾಹ್ನವಾದೀತು; ಸಾಯಂಕಾಲವಾದರೂ ಆದೀತು. ಆದ್ದರಿಂದ ಈ ಹೋಟೆಲಿನಲ್ಲೇ ಬಿಸ್ಕತ್ತು, ಚಹಾ ಸೇವಿಸಿದೆವು. ಹೋಟೆಲಿನವನು ನೂಡಲ್ಸ್ ತಯಾರಿಸಿಕೊಟ್ಟ. ಅಷ್ಟರಲ್ಲಿ ನಾವು ತಿಂದು ಎಸೆದ ಆಹಾರ ಪದಾರ್ಥಗಳನ್ನು ತಿನ್ನಲು ಬಂದ ನಾಯಿಯೊಂದು ವಿಚಿತ್ರವಾಗಿ ಕಂಡಿತು. ಅದರ ಹಲ್ಲುಗಳು ವಿಚಿತ್ರವಾಗಿ, ಭಾರೀ ಕಾಡು ಜಾತಿಯ ಮೃಗದಂತೆ ಕಂಡಿತು. ಹಿಮಾಲಯದ ನಾಯಿಗಳು ಹೀಗೇ ಇರಬೇಕು. ನಾವು ಅದನ್ನು ಎಷ್ಟು ಅಟ್ಟಿದರೂ ಅದು ಮರಳಿ ನಮ್ಮ ಬಳಿಗೆ ಬರುತ್ತಿತ್ತು. ಅದರ ಮೈಯೆಲ್ಲಾ ಕಜ್ಜಿಗಳಿದ್ದವು. ಸ್ವಾಮಿ ಕರುಣಾಕರಾನಂದರು ಅದನ್ನು ‘‘ಕಜ್ಜಿನಾಯಿ.. ನೋಡುವುದಕ್ಕೆ ಭಯಂಕರವಾಗಿದೆ’’ ಎನ್ನುತ್ತ ಜೋರಾಗಿ ನಗತೊಡಗಿದರು.

ಅಲ್ಲಿಂದ ಮುಂದಕ್ಕೆ  ಬುಗ್ಯಾಲ್‌ನ ತುದಿಯ ತನಕ ಒಂದು ದಾರಿ ಹೋಗುತ್ತದೆ; ಅದೇ ಪಿತೃಲೋಕಕ್ಕೆ ಪ್ರವೇಶದಂತಿದ್ದ, ಗಂಟೆಗಳನ್ನು ಕಟ್ಟಿದ್ದ ಜಾಗ. ಇನ್ನೊಂದು ದಾರಿ ಕವಲಾಗಿ ಗುಡ್ಡದ ಸೆರಗಿ

ನಲ್ಲಿ ಬಲಭಾಗದತ್ತ ತಿರುಗಿತ್ತು. ಅದೇ ಅನಸೂಯಾ ದೇವಿ ಮಂದಿರಕ್ಕೂ, ಮುಂದಕ್ಕೆ ಸಾಗಿ ಮಂಡಲ್ ಎಂಬಲ್ಲಿಗೂ ಸಾಗುವುದು. ನಾವು ಹೊರಟಿದ್ದು ಅದೇ ಪ್ರದೇಶಕ್ಕೆ; ಅದು ಊಖೀಮಠದಿಂದ ಗೋಪೇಶ್ವರಕ್ಕೆ ಹೋಗುವ ದಾರಿಯಲ್ಲಿ, ಸಗರ್‌ಗೆ ಮೊದಲೇ ಬರುತ್ತದೆ. ಅಲ್ಲಿಂದ ಸಗರ್ ಏಳೆಂಟು ಕಿಲೋಮೀಟರ್ ಅಷ್ಟೆ. ನಾವು ರುದ್ರನಾಥಕ್ಕೆ ಹೋದದ್ದು ಒಂದು ದಾರಿಯಾದರೆ, ಈಗ ಮರಳುತ್ತಿರುವುದು ಇನ್ನೊಂದು ದಾರಿ. ಆದ್ದರಿಂದ ಎರಡೂ ಪ್ರದೇಶಗಳನ್ನು ನೋಡುವಂತಾಯಿತು; ಎರಡೂ ವಿಭಿನ್ನ ಅನುಭವವೆ.

ಈ ಬಾರಿ ಬುಗ್ಯಾಲ್‌ನ ಹಾದಿ ಬಲುಬೇಗನೆ ಕೊನೆಗೊಂಡಿತು. ಕಡಿದಾದ ಪರ್ವತದಿಂದ ಇಳಿದು ಬರುವಾಗ, ಅದರಲ್ಲೂ ಸೂರ್ಯೋದಯದ ಬೆಳಗಿನ ಸಮಯದಲ್ಲಿ ಹೊಂಬಣ್ಣ ಮಿರುಗುತ್ತಿರುವಾಗ ಪರ್ವತದಿಂದ ಚಿಮ್ಮಿ ಬರುವ ಕಿರಣಗಳ ಶೋಭೆಯನ್ನು ವರ್ಣಿಸುವುದಕ್ಕೆ ಅಸಾಧ್ಯವೆನ್ನಬೇಕು. ಬುಗ್ಯಾಲ್‌ನಿಂದ ಇಳಿದು ಬರುತ್ತಿದ್ದಂತೆ ಮುಳ್ಳುಕಂಟಿ, ಪೊದರುಗಳು, ಸಣ್ಣಸಣ್ಣ ಮರಗಳು ಎದುರಾದವು. ಅಲ್ಲಲ್ಲಿ ಅನೇಕ ಹಕ್ಕಿಗಳು ಹಾರಾಡುತ್ತಿದ್ದವು. ನಾವು ಪರ್ವತ ಇಳಿಯುವಾಗ ನಡಿಗೆಯ ವೇಗ ಹೆಚ್ಚು; ಅಲ್ಲಲ್ಲಿ ಜೋರಾಗಿ ಓಡುವಂತೆ ಹೆಜ್ಜೆ ಹಾಕುತ್ತಿದ್ದೆವು. ''ಅಷ್ಟು ಜೋರಾಗಿ ಓಡಬೇಕಾದುದಿಲ್ಲ ಮಹಾರಾಜ್, ಪಹಾಡ್ ಇಳಿಯುವಾಗ ಆಯಾಸ ಹೆಚ್ಚು. ಎಲ್ಲಾದರೂ ಬಿದ್ದುಬಿಟ್ಟರೆ ಅಪಾಯ ಬೇರೆ. ನಿಧಾನವಾಗಿ ಹೋಗಿ, ತೊಂದರೆಯೇನಿಲ್ಲ'' ಎಂದ ವಿಕ್ರಂ ಸಿಂಹ. ಕರುಣಾಕರಾನಂದಜಿನ್ನ ಬಳಿ ಮೆಲ್ಲನೆ, ''ನೋಡು ಅವನು ಬೇಕೆಂದೇ ಪ್ರಯಾಣ ನಿಧಾನ ಮಾಡಿಸುತ್ತಿದ್ದಾನೆ. ಗ್ಯಾರಂಟಿ ನಾಳೆಯೇ ಅವನು ಮಂಡಲ್‌ಗೆ ತಲುಪಿಸುತ್ತಾನೆ. ಒಂದು ದಿನದ ಹಣ ಹೆಚ್ಚಿಗೆ ಕೊಡಬೇಕಾದೀತಲ್ಲ'' ಎಂದರು. ನಾವೇನೂ ನಡಿಗೆ ನಿಧಾನ ಮಾಡಲಿಲ್ಲ. ಬರಬರುತ್ತ ದೊಡ್ಡ ಮರಗಳು, ದಟ್ಟ ಅರಣ್ಯದ ಹಾದಿಯಲ್ಲಿ ನಾವು ಮುಂದುವರಿದೆವು. ಹಲವಾರು ಮರಗಳ ಹೆಸರನ್ನೂ ನಮ್ಮ ಗೈಡ್‌ನಿಂದ ಕೇಳಿ ತಿಳಿದೆವು. ಪೈನ್, ದೇವದಾರು ಮರಗಳಲ್ಲದೆ ಅಲ್ಲಲ್ಲಿ ಭೋಜ್ (ಭೂರ್ಜವೃಕ್ಷ) ಮರವನ್ನು ತೋರಿಸಿದ. ಅದಲ್ಲದೆ 'ಸಮ್ರು' ಎಂಬ ಪೊದರುಗಳಿಂದ ತುಂಬಿದ ಒಂದು ಜಾತಿಯ ಮರ; ಕುರುಚುಲು ಎಲೆಗಳಿಂದ ಕೂಡಿದ 'ಖಸ್ರು' ಎಂಬ ಮರ; ಅಂಥದೇ ಇನ್ನೊಂದು ಮರ 'ದಧ್ಮ' – ಇವೆಲ್ಲ ಹೆಸರುಗಳನ್ನು ಹೇಳಿಕೊಟ್ಟ. ನಾವು ಮಾತನಾಡುತ್ತಿರಬೇಕಾದರೆ ಚಿಗರೆಯೊಂದು ಚಂಗನೆ ನೆಗೆದು ಪರಾರಿಯಾಯಿತು. ''ಇಲ್ಲಿ ಪ್ರಾಣಿಗಳಿವೆಯೆ?'' ಎಂದು ಕೇಳಿದೆವು. ''ಇವೆ ಸ್ವಾಮಿ; ಇಲ್ಲಿ ಭಲ್ಲೂ (ಕರಡಿ) ಇವೆ, ಹುಲಿಗಳಿವೆ, ಇನ್ನೂ ಏನೇನೋ ಕಾಣಸಿಗುತ್ತವೆ. ನಾನು ಅನೇಕ ಬಾರಿ ಇಲ್ಲಿ ಅವನ್ನೆಲ್ಲ ನೋಡಿದ್ದೇನೆ''ಎಂದ.

ನಾವು ನಡೆಯುತ್ತ ಹೋಗುತ್ತಿದ್ದಂತೆಲ್ಲ ಅರಣ್ಯದ ದಟ್ಟಣೆ ಹೆಚ್ಚುತ್ತಿತ್ತು. ಬಿಸಿಲು ವಿರಳವಾಗುತ್ತ ಬಂತು; ಮರಗಳ ಗಾತ್ರವೂ ಅಧಿಕವಾಗುತ್ತಿತ್ತು. ನಾವು ಮುಂದುವರಿದಂತೆ ಆಶ್ಚರ್ಯವಾಗತೊಡಗಿತು: ದಾರಿಯೇ ಕಾಣಿಸದಂತೆ ದಟ್ಟವಾದ ಮರಗಳ ತರಗೆಲೆ ನೆಲವನ್ನೆಲ್ಲ ಆವರಿಸಿಕೊಂಡುಬಿಟ್ಟಿತ್ತು. ಹೆಜ್ಜೆಯಿಟ್ಟಲ್ಲಿ ತರಗೆಲೆ; ಅನೇಕ ಸಲ ಜಾರಿ ಬಿದ್ದುಬಿಟ್ಟೆವು. ವೇಗವಾಗಿ ಇಳಿಯುತ್ತಾ ಬಂದಂತೆ ದಾರಿಯೆಲ್ಲಿ ಎಂದು ಗೊತ್ತಾಗದೆ ತಡಕಾಡಿದಾಗ ನಮ್ಮ ಗೈಡ್ ನಮಗೆ ದಾರಿ ತೋರಿಸಿಕೊಟ್ಟ. ಮಾರ್ಗದರ್ಶಕನೊಬ್ಬ ಅಗತ್ಯವೆಂದು ಕಂಡದ್ದು ಇಲ್ಲೇ. ಅವನು ದಿನನಿತ್ಯ ಓಡಾಡುವ ಸ್ಥಳವಾದ್ದರಿಂದ ಅವನಿಗೆ ದಾರಿಯೆಲ್ಲ ಗೊತ್ತಿತ್ತು. ಆದರೆ ನಾವಾಗಿಯೇ ಮುನ್ನಡೆದಿದ್ದರೆ ಖಂಡಿತ ದಿಕ್ಕುಗೆಡುತ್ತಿದ್ದೆವು. ಹಿಮಾಲಯದಲ್ಲಿ ದಟ್ಟ ಅರಣ್ಯವೆಂದರೆ ಹೇಗಿರಬಹುದೆಂಬ ಕಲ್ಪನೆ ನಮಗೆ ಸಿಕ್ಕಿತು. ಸಂಪೂರ್ಣ ನಿರ್ಜನವಾದ, ಒಂದಿಷ್ಟೂ ಹಾಳಾಗದೆ ಉಳಿದ ಅಂಥ ವನ್ಯತಾಣವನ್ನು ನೋಡಿದಾಗ ಒಂದು ಬಗೆಯ ವಿಚಿತ್ರ ಆನಂದವಾಗುತ್ತದೆ.

ನಾವು ಒಂದೇ ಸಮನೆ ಪರ್ವತವನ್ನು ಇಳಿಯುತ್ತಿದ್ದೆವು. ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಒಂದು ಸಣ್ಣ ಗುಡಿಸಲು ಕಾಡಿನ ಮಧ್ಯೆ ಕಾಣಿಸಿತು. ಅಲ್ಲಿ ನಾವು ನೀರು ಕುಡಿದು ದಣಿವಾರಿಸಿಕೊಂಡೆವು. ಅದೂ ಒಂದು ಹೋಟೆಲೆ! ಅಲ್ಲಿ ಚಹಾ ಮಾಡಲು ಹೇಳಿ, ಒಂದೆಡೆ ಕುಳಿತುಕೊಂಡಿರಬೇಕಾದರೆ ಗೈಡ್ ಹೇಳಿದ, ''ಇನ್ನು ಒಂದರ್ಧ ಗಂಟೆಯಲ್ಲಿ ನಾವು ಅನಸೂಯಾ ಮಂದಿರ ತಲುಪಬಹುದು.'' ನಮಗೆ ಆಶ್ಚರ್ಯವಾಯಿತು. ಅಂದರೆ ನಾವು ಮಂಡಲ್ ಹತ್ತಿರದವರೆಗೂ ಬಂದಂತೆಯೇ! ''ಇಲ್ಲಿಂದ ಮಂಡಲ್ ಎಷ್ಟು ದೂರ?'' ಎಂದು ಕೇಳಿದೆವು. ''ನೀವು ಈಗ ನಡೆದ ಹಾಗೆ ವೇಗವಾಗಿ ನಡೆದರೆ ಒಂದು ಗಂಟೆ ಸಾಕು. ಆದರೆ ನಿಮಗೆ ಆಯಾಸವಾಗಿಲ್ಲವೆ? ಅನಸೂಯಾ ಮಂದಿರದಲ್ಲಿ ದೇವರ ದರ್ಶನ ಮಾಡಿ, ಊಟ, ವಿಶ್ರಾಂತಿ ಎಲ್ಲ ತೆಗೆದುಕೊಂಡು, ನಾಳೆ ಬೆಳಿಗ್ಗೆ ನಿಧಾನವಾಗಿ ಹೊರಟರೆ ಸಾಕಲ್ಲ?'' ಎಂದ ವಿಕ್ರಂ ಸಿಂಹ. ''ಅದೆಲ್ಲ ಆಗಲ್ಲ, ಊಟ ಮಾಡಿ ಹೊರಡುವುದೇ. ಆದಷ್ಟು ಬೇಗ ಸಗರ್ ತಲುಪಿಬಿಡಬೇಕು'' ಎಂದೆವು ನಾವು.

ಚಹಾಕುಡಿದು ಹೊರಟರೆ ಒಂದು ಸಣ್ಣ ತೊರೆ ಎದುರಾಯಿತು. ನೀರು ಕಂಡಿದ್ದೇ ತಡ, ವಿಕ್ರಂ ಸಿಂಹನಿಗೆ ನೀರಿಗಿಳಿದು ಸ್ನಾನ ಮಾಡುವ ಬಯಕೆಯಾಯಿತು. ''ಒಂದು ಹತ್ತೇ ನಿಮಿಷ ಮಹಾರಾಜ್..'' ಎಂದು ಅವನು ನೀರಿಗಿಳಿದೇ ಬಿಟ್ಟ. ನೀರು ತಣ್ಣಗಿತ್ತು; ಸ್ವಚ್ಛವಾಗಿತ್ತು. ನಡೆದು ಆಯಾಸಗೊಂಡಿದ್ದ, ಬೆವರು ಇಳಿಯುತ್ತಿದ್ದ ನಮಗೂ ನೀರನ್ನು ಕಂಡಾಗ ಸ್ನಾನ ಮಾಡಬೇಕೆನಿಸಿತಾದರೂ, ಎಲ್ಲಾದರೂ ಶೀತ ಹಿಡಿದು ಬಿಟ್ಟರೆ ನಮ್ಮ ಯಾತ್ರೆಗೆ ಭಂಗವಾದೀತೆಂದು ಮುಂದುವರಿಯಲಿಲ್ಲ. ಆದರೆ ಮನಸಾರೆ ಮುಖ ತೊಳೆದೆವು; ಕೈಕಾಲು ತೊಳೆದುಕೊಂಡೆವು. ನೀರು ಕುಡಿಯಲು ಯೋಗ್ಯವಾಗಿದ್ದರೂ, ಹರಿಯುವ ನೀರನ್ನು ಕುಡಿದರೆ ಎಲ್ಲಿ ಆರೋಗ್ಯ ಕೆಟ್ಟೀತೋ ಎಂಬ ಭಯ ನಮಗೆ. ನಮ್ಮ ಗೈಡ್‌ನಂತೂ ನೀರಿನಲ್ಲಿ ಮನಸಾರೆ ಸ್ನಾನ ಮಾಡಿದ; ಮೇಲಿನಿಂದ ಬೀಳುತ್ತಿದ್ದ ಜಲಧಾರೆಯಲ್ಲಿ ಮೈಯೊಡ್ಡಿ ಆನಂದಿಸಿದ.



### ೮. ಅನಸೂಯಾ ಟಾಪ್

ಈಗ ಪರ್ವತದ ಏರಿಳಿತವೆಲ್ಲ ಮುಗಿದಿತ್ತು; ನಾವು ತಗ್ಗಿನ ಪ್ರದೇಶಕ್ಕೆ ಬಂದಿದ್ದೆವು. ಆದರೆ ದಟ್ಟ ಅರಣ್ಯ. ''ಆಯಿತು, ನಾವು ಬಂದೇಬಿಟ್ಟೆವು. ಅಲ್ಲೇ ನೋಡಿ – ಅನಸೂಯಾ ಟಾಪ್ ಕಾಣಿಸು

ತ್ತಿದೆ'' ಎಂದ ಗೈಡ್. ಒಂದು ಸಣ್ಣ ಬೆಟ್ಟದ ತುದಿಯಲ್ಲಿ ಅನಸೂಯಾ ಮಂದಿರವಿದ್ದುದರಿಂದ ಅದನ್ನು ಅನಸೂಯಾ 'ಟಾಪ್' ಎಂದು ಕರೆಯುತ್ತಿರಬೇಕು ಎಂದುಕೊಂಡೆ. ನಾವು ನಡೆಯುತ್ತ ತುಸು ಇಳಿಜಾರಿನಲ್ಲಿ ಸಾಗಬೇಕಾಯಿತು. ಬೆಳಿಗ್ಗೆ ಐದೂವರೆಯಿಂದ ನಿರಂತರ ನಡೆಯುತ್ತಿದ್ದ ನಮಗೆ ಈಗ ಸಣ್ಣ ಏರುದಾರಿಯನ್ನು ಏರುವುದೂ ಅಸಾಧ್ಯವೆನಿಸಿತು. ''ಆಯಿತಲ್ಲ ಸ್ವಾಮಿ; ಇನ್ನೇನು ಬಂದೇಬಿಟ್ಟಿತು. ಒಂದು ಹತ್ತೇ ನಿಮಿಷದ ಹಾದಿ. ಅಷ್ಟನ್ನು ನಡೆದೇ ಬಿಡಿ'' ಎಂದ ಗೈಡ್. ಹಾಗೂ ಹೀಗೂ ನಡೆದು ಅನಸೂಯಾ ಮಂದಿರದ ಬಳಿ ಬಂದೆವು. ಪೂಜಾರಿ ಇನ್ನೇನು, ದೇವಸ್ಥಾನ ಬಾಗಿಲು ಹಾಕಿ ಹೊರಡುವುದರಲ್ಲಿದ್ದ. ''ಹನ್ನೆರಡು ಗಂಟೆಗೆ ನಾವು ಬಾಗಿಲು ಹಾಕಿಬಿಡುತ್ತೇವೆ. ತಡಮಾಡಬೇಡಿ. ಬೇಗನೇ ದೇವರ ದರ್ಶನ ಮಾಡಿ ಬನ್ನಿ'' ಎಂದನಾತ. ನಾವು ಮಹಾಪತಿವ್ರತೆ, ಮಾತೆ ಅನಸೂಯೆಯ ದರ್ಶನ ಮಾಡಿ ಬರುವಷ್ಟರಲ್ಲಿ ಪೂಜಾರಿ ಭಾರೀ ಪೂಜೆ, ಅರ್ಚನೆ ಮಾಡಿಸುವ ಸನ್ನಾಹದಲ್ಲಿದ್ದ. ಆರತಿ ಬೆಳಗಿ ನಮಗೋಸ್ಕರ ವಿಶೇಷ ಪ್ರಾರ್ಥನೆ ಸಲ್ಲಿಸಿದ. ಅದೇ ರೀತಿ ಅವನು ನಮ್ಮಿಂದ ವಿಶೇಷ ಕಾಣಿಕೆಯನ್ನು ನಿರೀಕ್ಷಿಸುತ್ತಿದ್ದಾನೆಂದು ಅವನ ಮುಖ ಹೇಳುತ್ತಿತ್ತು. ಅವನಿಗೂ ಅನ್ಯಾಯವಾಗದಂತೆ, ನಮಗೂ ಹೊರೆಯಾಗದಂತೆ ನಾವು ಇಬ್ಬರೂ ಒಂದು ಐವತ್ತೈವತ್ತು ರೂಪಾಯಿ ದಕ್ಷಿಣೆ ಕೊಟ್ಟೆವು. ''ಸೀದಾ ನಮ್ಮ ಮನೆಗೇ ಬಂದು ಬಿಡಿ. ಅಲ್ಲಿ ಊಟಕ್ಕೆ ಎಲ್ಲ ವ್ಯವಸ್ಥೆಯಿದೆ'' ಎಂದ ಪೂಜಾರಿ. ನಾವು ಮೂಗಿನ ಮೇಲೆ ಬೆರಳಿಟ್ಟುಕೊಂಡೆವು. ಅರೆರೆ! ದೇವಸ್ಥಾನದಲ್ಲೂ ಪೂಜಾರಿಗೆ ಲಾಭ; ಅಲ್ಲಿಗೆ ಬಂದವರನ್ನು ತನ್ನ (ಮನೆಯೇ ಆಗಿರುವ) ಹೋಟೆಲಿನತ್ತ ತಿರುಗಿಸಿ, ಅಲ್ಲೂ ವ್ಯಾಪಾರ, ಲಾಭ! ವ್ಯವಹಾರ ಚತುರತೆ ಎಂದರೆ ಹೀಗಿರಬೇಕು ಎಂದುಕೊಂಡೆವು. ಆದರೆ ಮುಂದೆ ಅವನ ಮನೆಗೆ ಹೋಗಿ ಊಟ ಮಾಡಿ, ಅವನ ಜೊತೆಗೆ ಮಾತುಕತೆ ಆಡಿದಾಗ ಅವನು ಒಳ್ಳೆಯ ವ್ಯಕ್ತಿ, ಕೇವಲ ವ್ಯವಹಾರ ನಿಪುಣನಲ್ಲ ಎಂಬುದು ಮನವರಿಕೆಯಾಯಿತು.

ನಾವು ಆ ಪೂಜಾರಿಯ ಮನೆಗೆ ಹೋದೆವು. ಅದೇ ಹೋಟೆಲು, ಅದೇ ಮನೆ, ಅದೇ ಲಾಡ್ಜ್. ಮನೆಯ ಸುತ್ತಮುತ್ತ ತರಕಾರಿ, ಹೂಗಿಡಗಳು, ಧಾನ್ಯ ಎಲ್ಲ ಬೆಳೆಸಿದ್ದರು. ಬೆಟ್ಟದಿಂದ ಇಳಿದು ಬರುವ ನೀರನ್ನೇ ಕುಡಿಯುವುದಕ್ಕೂ, ತರಕಾರಿ ಗಿಡಗಳಿಗೂ ಬಳಸುತ್ತಿದ್ದರು. ಸುಂದರವಾದ ಪರಿಸರ; ಸುತ್ತಮುತ್ತ ಕೆಲವೊಂದು ಮನೆಗಳು; ಹಳ್ಳಿಯ ಜನಜೀವನ.

**ಅನಸೂಯಾ ಮಂದಿರ**



ಮನೆಯ ಮಹಡಿಯ ಮೇಲೆ ಊಟಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಊಟ ತಂದುಕೊಟ್ಟು , ಆತ್ಮೀಯವಾಗಿ ಮಾತನಾಡಿಸಿದ ಪೂಜಾರಿ, ''ಇಲ್ಲೇ ಒಂದೆರಡು ದಿನ ಇದ್ದು ಹೋಗಿ'' ಎಂದ. ಅವನ ಮಾತಿನ ಧಾಟಿಯಿಂದ, ಅವನು ಕೇವಲ ಹಣಕ್ಕಾಗಿ ನಮ್ಮನ್ನು ನಿಲ್ಲಿಸಬೇಕೆಂದು ಪ್ರಯತ್ನಿಸುತ್ತಿಲ್ಲ ಎಂದು ನಮಗರ್ಥವಾಯಿತು. ಹಳ್ಳಿಯ ಜನರ ಸಹಜ, ಪ್ರಾಮಾಣಿಕ ಆತಿಥ್ಯ ಅವನಲ್ಲಿ ಕಂಡುಬಂತು. ನಾವು ನಮ್ಮ ಯಾತ್ರೆ ಮುಂದುವರಿಸುವ ಬಗ್ಗೆ ಹೇಳಿ, ಊಟವಾದ ಕೂಡಲೇ ಹೊರಡುವ ಅನಿವಾರ್ಯತೆಯನ್ನು ತಿಳಿಸಿದೆವು. ಕೇವಲ ಕುತೂಹಲಕ್ಕಾಗಿ ಸ್ವಾಮಿ ಕರುಣಾಕರಾನಂದಜಿ ನಮ್ಮ ಗೈಡನ್ನು ಕೇಳಿದರು: ''ಇಲ್ಲಿ ಜಮೀನಿಗೆ ಬೆಲೆ ಎಷ್ಟಿದೆ?'' ಅವನು ಒಂದು ಗದ್ದೆಯ ಪ್ರದೇಶವನ್ನು ತೋರಿಸಿ, ''ಸುಮಾರು ಐವತ್ತು ಸಾವಿರಕ್ಕೆ ಇಷ್ಟು ಜಾಗ ಸಿಗಬಹುದು'' ಎಂದ. ಬೇರೆ ಕಡೆಯಾಗಿದ್ದರೆ ಕನಿಷ್ಠ ಹತ್ತು ಲಕ್ಷವಾದರೂ ಬರುತ್ತಿತ್ತು ಅಷ್ಟು ಸ್ಥಳಕ್ಕೆ; ತುಂಬ ಅಗ್ಗವಾಗಿದೆಯಲ್ಲ ಅನ್ನಿಸಿತು.

ಮಧ್ಯಾಹ್ನ ಊಟ ಮುಗಿಸಿ ನಾವು ಹೆಚ್ಚು ಹೊತ್ತು ಅಲ್ಲಿ ಉಳಿಯಲಿಲ್ಲ. ಸುಮಾರು ಎರಡು ಗಂಟೆಯ ಹೊತ್ತಿಗೆ ಅಲ್ಲಿಂದ ಹೊರಟು ಹಳ್ಳಿಯ ಮನೆಗಳ ನಡುವೆ, ಗದ್ದೆಯ ಬದುವಿನ ದಾರಿಗಳಲ್ಲಿ ನಡೆಯುತ್ತಾ ಬಂದು ೩.೧೦ಕ್ಕೆ ಮಂಡಲ್ ಎಂಬ ಸ್ಥಳವನ್ನು ತಲುಪಿದೆವು. ಅದು ಸಗರ್‌ಗೆ ಮೊದಲೇ ಸಿಗುವ ಪ್ರದೇಶ; ಗೌರೀಕುಂಡದಿಂದ ಗೋಪೇಶ್ವರಕ್ಕೆ ಹೋಗುವ ರಸ್ತೆಯಲ್ಲಿ. ಅಲ್ಲಿಗೆ ತಲುಪಿದ ನಾವು ಔಷಧಿಯೇ ಮೊದಲಾದ ಅಗತ್ಯ ಸಾಮಾನುಗಳನ್ನು ಖರೀದಿಸಿದೆವು. ಅಲ್ಲಿಂದ ಸಗರ್‌ಗೆ ಹೋಗಲು ಬಸ್ಸುಗಳಿರಲಿಲ್ಲ; ಅನೇಕ ಜೀಪುಗಳು ಅಲ್ಲಿಂದ ಸವಾರಿ (ಅಂದರೆ ಸರ್ವಿಸ್) ಹೋಗುತ್ತಿದ್ದವು. ಆದರೆ ನಾವು ಅಲ್ಲಿಗೆ ತಲುಪಿದ ಸಮಯ ಚೆನ್ನಾಗಿರಲಿಲ್ಲವೋ ಏನೋ, ತುಂಬ ಹೊತ್ತು ಅಲ್ಲಿ ಕಾಯಬೇಕಾಯಿತು. ಸುಮಾರು ಅರ್ಧಗಂಟೆಯ ನಂತರ ಒಂದು ಜೀಪ್ ಹೊರಟಿತು. ನಾವು ಅದರಲ್ಲಿ ಹೊರಟು ಸಗರ್ ತಲಪುವಾಗ ಸುಮಾರು ೪.೧೫ ಆಗಿತ್ತು. ಬೇಗನೆ ನಮ್ಮ ಗಮ್ಯಸ್ಥಾನವನ್ನು ತಲುಪಿದ ಉತ್ಸಾಹದಲ್ಲಿ ಒಂದು ಚಹಾ ಕುಡಿದು, ಗೈಡ್‌ಗೂ ಚಹಾ ಕುಡಿಸಿ, ಅವನ ಶುಲ್ಕವನ್ನು ಚುಕ್ತಾ ಮಾಡಿದೆವು. ಅವನು ತನ್ನ ಫೋನ್‌ನಂಬರ್ ಕೊಟ್ಟು, ನಮಸ್ಕಾರ ಮಾಡಿ, ''ಇನ್ನು ಯಾರಾದರೂ ಯಾತ್ರಿಕರು ಬರುವವರಿದ್ದರೆ ನನ್ನ ಹೆಸರು ಹೇಳಿ, ನನ್ನನ್ನೇ ಗೈಡ್ ಆಗಿ ಕರೆದುಕೊಳ್ಳಲು ಹೇಳಿ. ವಿಕ್ರಂ ಸಿಂಹ ಬಿಷ್ಟ ಅಂತ, ಬಹಳ ಒಳ್ಳೆಯ ವ್ಯಕ್ತಿ ಅಂತ ಪರಿಚಯಿಸಿ'' ಎಂದ. ನಾವು ''ಆಗಲಿ ಮಹಾರಾಯ, ನಮಸ್ಕಾರ'' ಎಂದು ಧನ್ಯವಾದ ಹೇಳಿ ಬೀಳ್ಕೊಟ್ಟೆವು.

ಸಗರ್‌ಗೆ ಬಂದ ಬಳಿಕ ನಾವು ರುದ್ರನಾಥಕ್ಕೆ ಹೊರಡುವ ಮೊದಲು ತಂಗಿದ್ದ ಅದೇ ಲಾಡ್ಜಿನ ವಿಶಾಲವಾದ ಹಾಲ್‌ಗೆ ಬಂದೆವು.

ನಮಗೆ ಅಸಾಧ್ಯ ಆಯಾಸ ಉಂಟಾದ್ದರಿಂದ ನಾವು ಕೂಡಲೇ ವಿಶ್ರಾಂತಿ ಪಡೆದೆವು. ರಾತ್ರಿ ಎಂಟು ಗಂಟೆಯವರೆಗೂ ನಾವು ಗಾಢ ನಿದ್ರೆ ಮಾಡಿದೆವು. ಹೋಟೆಲ್ ಮಾಲೀಕನೊಂದಿಗೆ ಮಾತನಾಡುತ್ತ ಮರುದಿನ ಬೆಳಿಗ್ಗೆ ನಾವು ಅಲ್ಲಿಂದ ಹೊರಟು, ಗೋಪೇಶ್ವರ ಮೂಲಕ ಕಲ್ಪೇಶ್ವರಕ್ಕೆ ಹೋಗುವ ವಿಚಾರ ತಿಳಿಸಿದೆವು. ಅವನ ಶುಲ್ಕ ಚುಕ್ತಾ ಮಾಡಿ, ಮರಳಿ ಲಾಡ್ಜಿಗೆ ಬಂದು, ಮರುದಿನ ಎದ್ದ ಕೂಡಲೇ ಆದಷ್ಟು ಬೇಗ, ಅಂದರೆ ಆರು ಗಂಟೆಗಾದರೂ ಹೊರಡಬೇಕು ಎಂದು ತೀರ್ಮಾನಿಸಿ ಮಲಗಿಕೊಂಡೆವು.

## ೫. ಕಲ್ಪೇಶ್ವರ

### ೧. ವಿಚಿತ್ರ ಜೀಪ್ ಪ್ರಯಾಣ

ಬೆಳಿಗ್ಗೆ ಮೈಮುರಿದೆದ್ದು ನೋಡುವಾಗ ಮೈಕೈಯೆಲ್ಲ ಆಯಾಸದಿಂದ ನೋಯುತ್ತಿತ್ತು. ಆದರೆ ಏಳದೆ ಉಪಾಯವಿಲ್ಲ. ಆದಷ್ಟು ಬೇಗ ಹೊರಟು ಕಲ್ಪೇಶ್ವರ ದರ್ಶನ ಮಾಡಬೇಕಿತ್ತು. ಕಲ್ಪೇಶ್ವರವನ್ನು ತಲುಪುವುದು ಸುಲಭ; ಕಾರಣ ಅದು ಅಷ್ಟೇನೂ ಎತ್ತರದ ಪ್ರದೇಶವಲ್ಲ. ಎದ್ದು ಮುಖ ತೊಳೆದು, ಶೌಚಾದಿ ಮುಗಿಸಿ, ಬಟ್ಟೆಬರೆ ಹಾಕಿಕೊಂಡು ಹೊರಟು ನಿಂತಾಗ ಐದೂವರೆ ಗಂಟೆ. ಲಗುಬಗೆಯಿಂದ ಹರಿಯಾಲಿ ಹೋಟೆಲಿಗೆ ಬಂದು, ಒಂದು ಗ್ಲಾಸ್ ಚಹ ಕುಡಿದೆವು. ಹೋಟೆಲಿನವನು ತನ್ನ ವಿಸಿಟಿಂಗ್ ಕಾರ್ಡ್ ಕೊಟ್ಟ, 'ನಿಮ್ಮ ಕಡೆಯಿಂದ ಯಾತ್ರೆ ಬರುವವರು ಬರಲಿ' ಎಂದ. ಅವನಿಗೆ ವಿದಾಯ ಹೇಳಿ ರಸ್ತೆ ಬದಿಗೆ ಬಂದು ನಿಂತರೆ, ಒಂದೂ ಬಸ್ ಬರುವ ಲಕ್ಷಣವಿಲ್ಲ. ಹೋಟೆಲಿನವನು ಹೇಳಿದ ಪ್ರಕಾರ ಆರುಗಂಟೆಗೊಂದು ಬಸ್ ಬರಬೇಕಿತ್ತು. ಆದರೆ ಇನ್ನೂ ಆರು ಗಂಟೆಯಾಗಿರಲಿಲ್ಲ. ಕೊನೆಗೂ ಒಂದು ಬಸ್ ಬಂತು. ಅದರಲ್ಲಿ ಚಮೋಲಿ ಎಂದು ಬರೆದಿತ್ತು. ನಮಗೆ ಚಮೋಲಿಗೆ ಹೊಗಬೇಕಿತ್ತು. ಗೋಪೇಶ್ವರವನ್ನು ದಾಟಿ ಚಮೋಲಿ ತಲುಪಿ ಬಿಟ್ಟರೆ, ಅಲ್ಲಿಂದ ಬದರೀನಾಥಕ್ಕೆ ಹೋಗುವ ದಾರಿಯಲ್ಲಿ ಹೆಲಂಗ್ ಎಂಬ ಸ್ಥಳದ ತನಕ ಬಸ್ ಪ್ರಯಾಣ ಮಾಡಬೇಕು. ಮುಂದಕ್ಕೆ ಉರ್ಗಾಂವ್ ಎಂಬಲ್ಲಿಯವರೆಗೆ ಜೀಪ್ ಮೂಲಕ ಪ್ರಯಾಣಿಸಬೇಕು. ಬಸ್‌ನಲ್ಲಿ ಸೀಟುಗಳು ಖಾಲಿ ಇರಲಿಲ್ಲ ; ಆದರೂ ಅದರಲ್ಲೇ ಹೋದೆವು. ಕಡೇ ಪಕ್ಷ ಗೋಪೇಶ್ವರದಲ್ಲಿಯಾದರೂ ಸೀಟ್ ಸಿಗಬಹುದೆಂಬ ನಿರೀಕ್ಷೆಯಿತ್ತು.

ನಿರೀಕ್ಷೆಯಂತೆ ಗೋಪೇಶ್ವರದಲ್ಲಿ ಕುಳಿತುಕೊಳ್ಳಲು ಸೀಟು ಸಿಕ್ಕಿದಾಗ 'ಉಸ್ಸಪ್ಪ' ಎಂದು ಕುಳಿತೆವು. ಅಲ್ಲಿಂದ ಹೊರಟ ಬಸ್ಸು ೭.೩೦ಕ್ಕೆ ಚಮೋಲಿ ತಲುಪಿತು. ಚಮೋಲಿಯಲ್ಲಿ ತಿಂಡಿ ತಿನ್ನಬಹುದು ಎಂದುಕೊಂಡಿದ್ದರೆ, ನಾವು ಅಲ್ಲಿ ಬಸ್ ಇಳಿದ ತಕ್ಷಣ ಒಂದು ಜೀಪ್ ಹೆಲಂಗ್‌ಗೆ ಹೊರಟು ನಿಂತಿತ್ತು. ತಡ ಮಾಡುವುದೇಕೆ, ಹೆಲಂಗ್‌ನಲ್ಲೇ ತಿಂಡಿ ಮಾಡಿದರಾಯಿತು ಎಂದು ಜೀಪ್ ಹತ್ತಿ ಕುಳಿತೆವು. ಅಲ್ಲಿಂದ ೯ ಘಂಟೆಯ ಹೊತ್ತಿಗೆ ಹೆಲಂಗ್ ತಲುಪಿದೆವು. ಅಲ್ಲಿ ವಿಚಾರಿಸಿದಾಗ ತಿಳಿಯಿತು, ಸ್ವಲ್ಪ ಹೊತ್ತಿಗೆ ಮೊದಲು ಒಂದು ಜೀಪ್ ಉರ್ಗಾಂವ್‌ಗೆ ಹೊರಟು ಹೋಗಿತ್ತು; ಇನ್ನು ಅಲ್ಲಿಗೆ ಜೀಪ್ ಹೋಗುವುದು ಮಧ್ಯಾಹ್ನ ಒಂದು ಗಂಟೆಗೇ ಎಂದು. ಇನ್ನೇನು ಮಾಡಲಿ ಎಂದು ಚಿಂತಿಸುತ್ತ, ''ಮೊದಲು ತಿಂಡಿ ಮಾಡೋಣ. ಆಮೇಲೆ ಏನು ಗಾಡಿ ಸಿಗುತ್ತದೋ ಅದರಲ್ಲಿ ಹೋಗಬೇಕಷ್ಟೆ'' ಎಂದರು ಕರುಣಾಕರಾನಂದರು.

ಹೆಲಂಗ್ ಎಂದರೆ ಬದರೀನಾಥಕ್ಕೆ ಹೋಗುವ ಮುಖ್ಯರಸ್ತೆಯಲ್ಲಿ ಸಿಗುವ ಒಂದು ಸಣ್ಣ ಊರು. ರಸ್ತೆಯ ಇಕ್ಕೆಲದಲ್ಲಿ ಹತ್ತಾರು ಅಂಗಡಿಗಳಿವೆ. ಅವುಗಳಲ್ಲಿ ಒಂದು ಹೋಟೆಲಿಗೆ ಹೋಗಿ ತಿಂಡಿ ತಿಂದೆವು. ತಿಂಡಿ ತಿನ್ನುವಾಗಲೆಲ್ಲ ನಮ್ಮ ಗಮನ, ಎಲ್ಲಾದರೂ ಜೀಪ್ ಅಥವಾ ಯಾವುದಾದರೂ ವಾಹನ ಕಲ್ಪೇಶ್ವರದ ಕಡೆಗೆ ಹೋಗುವುದೋ ಎಂದಾಗಿತ್ತು. ಅನಂತರ ಹೋಟೆಲಿನಲ್ಲಿ ವಿಚಾರಿಸಿದಾಗ ಅವನೂ ಹೇಳಿದ, 'ಮಧ್ಯಾಹ್ನ ಒಂದು ಗಂಟೆಯ ತನಕ ಅಲ್ಲಿಗೆ ಜೀಪ್ ಹೋಗಲಾರದು' ಅಂತ. ನಮಗೆ ತುಂಬ ಕಸಿವಿಸಿಯಾಯಿತು. ಸಾಧ್ಯವಾದರೆ ಅಂದೇ ಕಲ್ಪೇಶ್ವರ ದರ್ಶನ ಮಾಡಿಕೊಂಡು ಮರಳಿ ಬರಬೇಕೆಂದಿದ್ದೆವು. ಅಲ್ಲಿಗೆ ತಲಪುವಾಗಲೇ ಸಾಯಂಕಾಲವಾಗಿ ಬಿಟ್ಟರೆ ಮರಳಿ ಬರುವುದೆಂತು? ಆದಷ್ಟು ಬೇಗನೆ ಕಲ್ಪೇಶ್ವರಕ್ಕೆ ಹೋಗಿ ಬಿಟ್ಟರೆ ಚೆನ್ನಾಗಿರುತ್ತಿತ್ತು. ಆದರೆ ಯಾವುದಾದರೂ ಗಾಡಿ ಬರುವಲ್ಲಿ ತನಕ ಕಾಯುವುದನ್ನು ಬಿಟ್ಟರೆ ನಮಗೆ ಬೇರೆ ದಾರಿ ಇರಲಿಲ್ಲ.

ಸುಮಾರು ೧೦.೩೦ರ ಹೊತ್ತಿಗೆ ಒಂದು ಕ್ಯಾರಿಯರ್ ಜೀಪ್ ಬಂದು, ಕಲ್ಪೇಶ್ವರಕ್ಕೆ ಹೋಗುವ ರಸ್ತೆಯತ್ತ ತಿರುಗಿತು. ಕೂಡಲೇ ನಾವಿಬ್ಬರೂ ಏನು ಗಾಡಿ, ಯಾವ ಕಡೆಗೆ ಹೋಗುತ್ತದೆ ಎಂದು ಏನನ್ನೂ ವಿಚಾರಿಸದೆ ರಸ್ತೆಯ ಮಧ್ಯಕ್ಕೆ ಹೋಗಿ ಕೈತೋರಿಸಿದೆವು. ಅನಂತರ ತಿಳಿಯಿತು, ಜೀಪಿನ ಹಿಂಭಾಗದಲ್ಲಿ ಸಾಮಾನುಗಳಿವೆ ಎಂಬುದಾಗಿ. ಮುಂಭಾಗದ ಸೀಟು ಆಗಲೇ ಭರ್ತಿಯಾಗಿತ್ತು. ಇನ್ನಿಬ್ಬರನ್ನೂ ಹೆಚ್ಚಾಗಿ ತುಂಬಿಸಿಕೊಂಡಿದ್ದರು. ಡ್ರೈವರನ್ನು ಕೇಳಿದೆವು, ''ನಾವು ಕಲ್ಪೇಶ್ವರಕ್ಕೆ ಹೋಗಬೇಕು. ಹೇಗಾದರೂ ಉರ್ಗಾಂವ್ ತನಕ ನಮ್ಮನ್ನು ಕರೆದುಕೊಡು ಹೋಗಿ.'' ಅದಕ್ಕೆ ಅವನು ಮುಂದಿನ ಸೀಟಿನಲ್ಲಿ ಕುಳಿತವರ ಕಡೆಗೆ ತೋರಿಸಿ, ''ಇಲ್ಲಿ ಭರ್ತಿಯಾಗಿದೆ. ಹಿಂದೆ ಸಾಧ್ಯವಾದರೆ ಕುಳಿತುಕೊಳ್ಳಿ'' ಎಂದ.

ಅಷ್ಟು ಅವಕಾಶ ಸಿಕ್ಕಿದ್ದೇ ಮಹಾಭಾಗ್ಯ ಎಂದುಕೊಂಡು ನಾವು ಜೀಪ್‌ನ ಹಿಂಭಾಗದತ್ತ ಓಡಿದೆವು. ಅಲ್ಲಿ ಹೋಗಿ ನೋಡಿದರೆ, ಜೀಪಿನ ಹಿಂಭಾಗದಲ್ಲಿ ಸಿಮೆಂಟ್ ಗೋಣಿಚೀಲಗಳಿದ್ದವು. ಅವುಗಳ ಮೇಲೆ ಸಾಕಷ್ಟು ಧೂಳು, ಸಿಮೆಂಟ್ ಚೆಲ್ಲಿದ್ದವು. ಅದರ ಮೇಲೆ ಕುಳಿತುಕೊಳ್ಳುವುದೆ? ಆದರೆ ಬೇರೆ ದಾರಿಯಿಲ್ಲವಲ್ಲ! ಸಿಮೆಂಟ್ ಚೀಲಗಳ ಮೇಲೆ ಹತ್ತಿ ಕುಳಿತೇಬಿಟ್ಟೆವು. ಕೂಡಲೇ ಗಮ್ಮೆಂದು ಧೂಳು, ಸಿಮೆಂಟ್ ಎಲ್ಲ ಹೊಗೆಯಂತೆ ಮೇಲಕ್ಕೆದ್ದು ಬಂತು. ನಮಗೆ ಉಸಿರುಗಟ್ಟಿ ಕೆಮ್ಮು ಬಂದು, ''ಅಯ್ಯೋ ನಮ್ಮ ಅವಸ್ಥೆಯೇ'' ಎಂದು ಗೋಗರೆದುಕೊಂಡೆವು. ಆಗ ಕರುಣಾಕರಾನಂದಜಿ ಎಲ್ಲ ಮರೆತು ಜೋರಾಗಿ ನಗತೊಡಗಿದರು. ನನಗೂ ನಗದೆ ಬೇರೆ ದಾರಿಯಿರಲಿಲ್ಲ. ನಮ್ಮ ಕಷ್ಟ, ಸಂಕಟವನ್ನೆಲ್ಲ ನಗುತ್ತ ಮರೆತುಬಿಟ್ಟೆವು. ಒಂದರ್ಧ ಗಂಟೆಯಲ್ಲಿ ಜೀಪ್ ಒಂದು ನದಿಯನ್ನು ದಾಟಿ, ತಿರುವುಗಳಿಂದ ತುಂಬಿದ ದಾರಿಯಲ್ಲಿ ಮುಂದುವರಿದು, ರಸ್ತೆ ಎಲ್ಲಿಯವರೆಗೆ ಸಾಗುವುದೋ ಅಲ್ಲಿಯತನಕ ಮುಂದುವರಿದು



ನಿಂತಿತು. ಅಲ್ಲಿ ಅನೇಕ ಅಂಗಡಿ, ಹೋಟೆಲುಗಳಿದ್ದವು. ನಮ್ಮನ್ನು ಕಂಡಕೂಡಲೇ ಅಂಗಡಿ, ಹೋಟೆಲಿನವರು ಇನ್ನಿಲ್ಲದಂತೆ ಸ್ವಾಗತಿಸಿದರು, 'ಆಯಿಯೇ ಮಹಾರಾಜ್‌ಜೀ, ನಾಸ್ತಾ ಕೀಜಿಯೇ, ಚಾ ಪೀಯಿಯೇ' (ಬನ್ನಿ ಮಹಾರಾಜರುಗಳೇ; ತಿಂಡಿ ಮಾಡಿ; ಚಹಾ ಸೇವಿಸಿ) ನಮ್ಮ ಚಹಾ, ತಿಂಡಿ ಮುಗಿದಿದ್ದರಿಂದ, ನಾವು ಮುಂದಿನ ಪ್ರಯಾಣ ಹೇಗೆ ಮುಂದುವರೆಸಲಿ ಎಂದು ನೋಡತೊಡಗಿದೆವು.

## ೨. ಉರ್‌ಗಾಂವ್ ಹಳ್ಳಿಯಲ್ಲಿ

ನಾವು ಬಂದಿದ್ದ ರಸ್ತೆಯಲ್ಲೇ ತುಸು ಮುಂದೆ ನಡೆದರೆ, ರಸ್ತೆ ಅಲ್ಲೇ ಕೊನೆಗೊಂಡಿತ್ತು! ಇನ್ನು ನಾವಾಗಿಯೇ ಮುಂದುವರಿಯುವ ಹಾಗಿಲ್ಲ ಎಂದುಕೊಂಡು, ಅಲ್ಲಿ ಓಡಾಡುತ್ತಿದ್ದ ಒಬ್ಬಿಬ್ಬರನ್ನು ''ಕಲ್ಪೇಶ್ವರಕ್ಕೆ ಹೋಗುವ ದಾರಿ ಯಾವುದು ಹೇಳಿ'' ಎಂದು ಕೇಳಿದೆವು. ಅವನು ಅದೇ ರಸ್ತೆಯ ಕವಲು ಕೆಳಭಾಗದತ್ತ ಸಾಗುತ್ತಿದ್ದುದನ್ನು ತೋರಿಸಿ, ''ಅಲ್ಲೇ ನೇರ ಹೋಗಿ'' ಎಂದ. ನಾವು ಹಿಂದೆ ಪಂಚಕೇದಾರ ಯಾತ್ರೆ ಮಾಡಿದ್ದ ನಮ್ಮ ಸ್ವಾಮಿಗಳೊಬ್ಬರನ್ನು ಕೇಳಿದಾಗ ಅವರು 'ಉರ್‌ಗಾಂವ್‌ನಿಂದ ಕಲ್ಪೇಶ್ವರಕ್ಕೆ ಎರಡು ಕಿ.ಮೀ. ದೂರ' ಎಂದಿದ್ದರು. ಹಾಗಾಗಿ ಬೇಗ ನಾವು ಅಲ್ಲಿಗೆ ನಡೆದು ತಲುಪುತ್ತೇವೆ ಎಂಬ ಭರವಸೆಯಿಂದ ನಡೆಯಲಾರಂಭಿಸಿದೆವು.

ನಮ್ಮ ರಸ್ತೆ ಹಳ್ಳಿಯ ಮನೆಗಳ ನಡುವೆ, ಗದ್ದೆಗಳ ನಡುವೆ ಸಾಗಿತು. ದೂರದಲ್ಲಿ ಉನ್ನತವಾದ ಪರ್ವತಗಳು ಹಿಮಾಚ್ಛಾದಿತವಾಗಿದ್ದವು. ಅವುಗಳಲ್ಲೇ ಒಂದು ಶಿಖರ ಬದರೀನಾಥನ ಸಮೀಪದಲ್ಲಿರುವ ನೀಲಕಂಠ ಪರ್ವತವಾಗಿತ್ತು. ಆ ಹಳ್ಳಿಗೆ ಅದು ಅಷ್ಟೊಂದು ಹತ್ತಿರದಿಂದ, ಭವ್ಯವಾಗಿ ಕಾಣಿಸುತ್ತಿತ್ತು. ರಸ್ತೆಯ ಬದಿಯಲ್ಲಿ ಮನೆಗಳ ಮುಂದೆ ಸೇಬುಹಣ್ಣಿನ ಮರಗಳಿದ್ದವು; ಅವುಗಳಲ್ಲಿ ಸೇಬುಹಣ್ಣು ತುಂಬಿ ತುಳುಕಾಡುತ್ತಿದ್ದವು. ಆದರೆ ಅವು ಮಾಗಿರಲಿಲ್ಲ. ನಾವು ಮುಂದುವರಿಯುತ್ತಿದ್ದಂತೆ ಅನೇಕ ಮನೆಗಳು ಒಂದೆಡೆ ಗುಂಪಾಗಿದ್ದವು; ಅವುಗಳ ನಡುವೆ ಒಂದು ದೇವಸ್ಥಾನವೂ ಇತ್ತು. ಅದೇ ಕಲ್ಪೇಶ್ವರವಿರಬಹುದು ಎಂದು ಒಬ್ಬಿಬ್ಬರನ್ನು ವಿಚಾರಿಸಿದರೆ, 'ಇಲ್ಲ , ಇನ್ನೂ ಸ್ವಲ್ಪ ನಡೆಯಬೇಕು' ಎಂದು ರಸ್ತೆಯಲ್ಲಿ ಮುಂದುವರಿಯಲು ಸೂಚಿಸಿದರು. ಆಗಲೇ ನಾವು ನಡೆದಿದ್ದು ಎರಡು ಕಿ.ಮೀ. ಆಗಿದ್ದಿರಬಹುದು. ಇನ್ನು ಸ್ವಲ್ಪ ದೂರದಲ್ಲೇ ಕಲ್ಪೇಶ್ವರ ಮಂದಿರವಿರಬೇಕು ಎಂದು ಮುಂದುವರಿದೆವು.



ಉರ್‌ಗಾಂವ್ ಹಳ್ಳಿಯ ಮೂಲಕ..

ಆದರೆ ನಮ್ಮ ನಿರೀಕ್ಷೆ ಹುಸಿಯಯಿತು. ನಡೆದಷ್ಟೂ ರಸ್ತೆ ಮುಂದಕ್ಕೆ ಮುಂದಕ್ಕೆ ಸಾಗುತ್ತಿತ್ತು. ಯಾರನ್ನು ಕೇಳಿದರೂ, 'ಸ್ವಲ್ಪ ದೂರ ಮಾತ್ರ ಮಹಾರಾಜ್, ಮುಂದೆ ನಡೆಯಿರಿ' ಎನ್ನುತ್ತಿದ್ದರು. ನಡೆಯುತ್ತ ನಾವು ಸುಮಾರು ಆರೇಳು ಕಿಲೋಮೀಟರ್ ಕ್ರಮಿಸಿಬಿಟ್ಟಿದ್ದೆವು!

## ೩. ಕಲ್ಪೇಶ್ವರನ ದರ್ಶನ

ಆದರೆ ಇನ್ನೂ ಮುಂದಕ್ಕೆ ನಡೆದಾಗ ಇದ್ದಕ್ಕಿದ್ದಂತೆ ಪ್ರಕೃತಿಯ ಸೊಬಗು ಬದಲಾಯಿತು. ಹಚ್ಚಹಸುರಿನ ಮರಗಳು, ಏರುತಗ್ಗುಗಳಿಂದ ಕೂಡಿದ ಅರಣ್ಯ ಎದುರಾದವು. ನಾವು ನೋಡನೋಡುತ್ತಿದ್ದಂತೆ ಒಂದು ದೊಡ್ಡ ಜಲಪಾತ ಕಾಣಿಸಿತು. ಎತ್ತರದಿಂದ ಇಳಿದು ಬರುತ್ತಿದ್ದ ಸ್ವಚ್ಛ ನೀರಿನ ಮೇಲೆ ಬಿಸಿಲು ಬಿದ್ದಾಗ ಕಾಮನಬಿಲ್ಲು ಕಾಣಿಸುತ್ತಿತ್ತು.



ಸ್ವಲ್ಪ ದೂರದಲ್ಲಿ ಬೆಟ್ಟದ ಸೆರಗಿನಲ್ಲೇ ಒಂದೆಡೆ ಬೃಹತ್ತಾದ ಬಂಡೆಯೊಂದನ್ನು ಆಧರಿಸಿ ಕಟ್ಟಿದ ದೇವಾಲಯದಂಥ ರಚನೆ ಕಾಣಿಸಿಕೊಂಡಿತು. ಇದೇ ಕಲ್ಪೇಶ್ವರವೆಂದು ನಮಗೆ ಖಾತ್ರಿಯಾಯಿತು. ಹಾಗಾದರೆ ನಾವು ಜೀಪ್ ಇಳಿದಲ್ಲಿಂದ ಕಲ್ಪೇಶ್ವರಕ್ಕೆ ಎರಡು ಕಿ.ಮೀ. ದೂರ ಅಲ್ಲವೇ ಅಲ್ಲ! ಲೆಕ್ಕ ಹಾಕಿದರೆ ಸುಮಾರು ೯ ಕಿ.ಮೀ. ಆದರೂ ಆಗಬಹುದು. ಅಂತೂ ಮಧ್ಯಾಹ್ನ ೧೧.೩೦ರ ಹೊತ್ತಿಗೆ ಕಲ್ಪೇಶ್ವರವನ್ನು ತಲುಪಿದೆವು. ಮೆಟ್ಟಿಲೇರಿ ಹೋದರೆ ಬಂಡೆಯ ಮೇಲ್ಭಾಗಕ್ಕೆ ಹೋಗುತ್ತದೆ. ಅಲ್ಲಿ ಬಂಡೆಯ ನಡುವಿನ ಗವಿಯನ್ನೇ ದೇವಸ್ಥಾನದಂತೆ ಪರಿವರ್ತಿಸಿದ್ದಾರೆ. ಅಲ್ಲಿ ಕಲ್ಪೇಶ್ವರನ ದರ್ಶನ ಮಾಡಿ ಪುನೀತರಾದೆವು. ಶಿವನ ಜಟಾಜೂಟ ಇಲ್ಲಿ ಬಿದ್ದಿತ್ತಂತೆ, ಪಂಚಕೇದಾರದ ಕಥೆಯ ಪ್ರಕಾರ. ಅಲ್ಲಿ ಯಾತ್ರಿಕರ ಹಾವಳಿಯೇನೂ ಇಲ್ಲ. ಆದರೆ ಗಡ್ಡಧಾರಿಯಾದ ಒಬ್ಬ ಸಂನ್ಯಾಸಿ, ಮತ್ತು ಅವನ ಶಿಷ್ಯಂದಿರು ವಾಸವಾಗಿದ್ದರು.

ಕಲ್ಪೇಶ್ವರನ ದರ್ಶನ ಮಾಡಿ, ಪ್ರಸಾದ ಪಡೆದು ದಣಿವಾರಿಸಿಕೊಂಡ ನಾವು ಪಕ್ಕದಲ್ಲಿದ್ದ ಹೋಟೆಲಿಗೆ ಹೋದೆವು. ಅಲ್ಲಿಗೆ ಹೋದಾಗ, ಒಬ್ಬ ಸಾಧುವೇ ಆ ಹೋಟೆಲನ್ನು ನಡೆಸುತ್ತಿದ್ದುದು